## 2

ಹೆಣಗಳನ್ನು ನೋಡಿಬರಲು ಹೋದವರು ಬಂದಾಗ ಎರಡೂವರೆ ಆಗಿತ್ತು. ಮನೆಯ ಅಂಗಳದಲ್ಲೇ ನಿಂತು ಕಾಯುತ್ತಿದ್ದ ಚೇರ್ಮನ್ನರು ಯಾಕೆ ತಡ ಆಯ್ತುಲ್ಲ ಅಂತ ಕೇಳೋಕೆ ಮೊದಲೇ ರಾಜಣ್ಣ, 'ಪಾಳ್ಯದಿಂದ ಮುಂದೆ ಗುಡ್ಡದಳ್ಳಿಯೋರ ಟ್ರ್ಯಾಕ್ಟರು ಪಲ್ಟಿಯಾಗಿ ಬಿದ್ದೈತೆ. ಸೈಜುಗಲ್ಲುಗಳು ರೋಡು ಮೇಲೆ ಗುಪ್ಪೆಯಾಗಿ ಬಿದ್ದವೆ. ಅಲ್ಲೇ ಜೀಪು ನಿಲ್ಲಿಸಿ ನಡಕೊಂಡೇ ಹೋಗಿ ಬರೋಕೆ ಇಷ್ಟೊತ್ತಾತು... ನೀವೇಳಿದ್ದು ನಿಜ. ಕೆರೇಲಿ ಹೆಣಗಳು ತೇಲ್ತ ಇವೆ' ಅಂದ.

'ಇನ್ನು ತಡ ಮಾಡಂಗಿಲ್ಲ... ನಾನೋಗಿ ಪೊಲೀಸರಿಗೆ ಕಂಪ್ಲೇಂಟ್ ಕೊಟ್ಟುಬರ್ತೀನಿ...' ಎನ್ನುತ್ತ ಅಮರನಾಯಣ ಗಡಿಬಿಡಿ ಮಾಡಿದ. 'ಮೊದಲು ಕೈತೊಳಕಂಡು ಊಟ ಮಾಡ್ರಿ... ಆ ಮೇಲೆ ಹೋದರಾತು' ಅಂತ ಚೇರ್ಮನ್ನರು ಒತ್ತಾಯಿಸಿದರು. 'ಈಗ ಕಂಪ್ಲೇಂಟ್ ಕೊಟ್ರೂ ಅವ್ರು ಬರೋಕೆ ತಡ ಆಗುತ್ತೆ. ಕತ್ತಲಾದ ಮೇಲೆ ಹೆಣ ಎತ್ತಲ್ಲ. ಏನಿದ್ದರೂ ನಾಳೆ ಬೆಳಿಗ್ಗೇನೆ' ಎನ್ನುತ್ತ ಅವರನ್ನು ಮನೆಯೊಳಕ್ಕೆ ಬಲವಂತದಿಂದ ಕರಕೊಂಡು ಹೋದರು. ಸ್ವಲ್ಪ ಹೊತ್ತಲ್ಲೇ ಊರಿನ ಎಂಟ್ಹತ್ತು ಜನ ಪಿಡಿಓನ ಹುಡುಕಿಕೊಂಡು ಚೇರ್ಮನ್ನರ ಮನೆಗೇ ಬಂದರು.

'ಹದಿನೈದು ದಿನಗಳ ಹಿಂದೆ ಮೋಟರ್ ರಿಪೇರಿ ಮಾಡಿಸಿದ್ರಿ... ಅದು ಮತ್ತೆ ಕೆಟ್ಟೈತೆ ಅಂದ್ರೇನು? ಮೋಟರು ನಿಜವಾಗ್ಲೂ ಕೆಟ್ಟೈತೋ, ಇಲ್ಲ ದುಡ್ಡು ಹೊಡೆಯೋದಕ್ಕೆ ಹೊಸ ಪ್ಲಾನೊ. ಜನಕ್ಕೆ ತೊಂದರೆ ಕೊಡೋದೆ ನಿಮ್ಮ ಕೆಲ್ಸ ಆಯ್ತುಲ್ಲ... ಸುಮ್ಮನಿದ್ರೆ ತಿಂಗಳಿಗೊಂದಪ ಮೋಟರು ಕೆಡ್ತಲೇ ಇರುತ್ತೆ...' ಅಂತ ಏರು ದನಿಯಲ್ಲಿ ಕೇಳಿದವನು ಮಾಜಿ ಚೇರ್ಮನ್ನರ ಸೋದರಳಿಯ ಹನುಮಂತರಾಯ. ಅವನ ಬಾಯಿ ಜೋರು. ಅವನು ಸಹಜವಾಗಿ ಮಾತಾಡಿದರೂ ಅದು ರೋಫ್ ಹಾಕಿದಂತೆ ಇರುತ್ತಿತ್ತು. ಯಾರನ್ನು ಬೇಕಾದರೂ ಗದರಿಸುವ ಶಕ್ತಿ ಅವನಿಗಿತ್ತು. 'ಏಯ್ ಅಮರನಾರಾಯಣಪ್ಪ, ಒಳಗೆ ಕುಂತು ಏನ್ರಿ ಮಾಡ್ತಿದ್ದೀರ, ಬರ್ರಿ ಹೊರಕ್ಕೆ...' ಅಂತ ಅಬ್ಬರಿಸಿದ.

ಇನ್ನೇನು ತುತ್ತು ಎತ್ತಬೇಕು ಅಷ್ಟರಲ್ಲೇ ಕೇಳಿ ಬಂದ ಈ ಇರಿಯುವಂಥ ಮಾತಿಂದ ಪಿಡಿಓಗೆ ಕಿರಿಕಿರಿಯಾಗಿ ರೇಗಿ ಹೋಯಿತು. ಊಟ ಬಿಟ್ಟು ಏಳಲು ಮುಂದಾದ ಅವನನ್ನು ಚೇರ್ಮನ್ನರೇ ತಡೆದರು. 'ಅದೇನು ಅಂತ ನಾನು ನೋಡ್ತೀನಿ. ನೀವು ಕುಂತು ಊಟ ಮಾಡ್ರಿ' ಅನ್ನುತ್ತಲೇ ಅಂಗಳಕ್ಕೆ ಬಂದರು.

'ಹನುಮಂತರಾಯ, ನೀನು ಹೇಳ್ತಿರೋದು, ಕೇಳ್ತಿರೋದು ಸರಿಯಾಗೇ ಇದೆ. ಮೂರು ತಿಂಗಳೊಳಗೆ ಮೋಟ್ರು ರಿಪೇರಿಗೆ ಬಂದ್ರೆ ಫ್ರೀಯಾಗಿ ಸರಿಮಾಡಿ ಕೊಡಬೇಕು ಅಂತ ಮಾತಾಗಿತ್ತು... ಈ ಸಲ ರಿಪೇರಿಗೆ ಪಂಚಾಯ್ತಿಯಿಂದ ಒಂದೇ ಒಂದು ದಮ್ಮಡಿನೂ ಕೊಡಲ್ಲ. ಅಂಗೇ ರಿಪೇರಿ ಮಾಡಿಸ್ತೀವಿ... ಪಿಡಿಓ ಊಟಕ್ಕೆ ಕುಂತವನೆ. ಮುಗೀತಿದ್ದಂಗೆ ಹಿರಿಯೂರಿಗೆ ಹೋಗಿ ಮೆಕ್ಯಾನಿಕ್ ಕರಕಂಡ್ ಬರ್ತನೆ. ನಾಳೆ ಸಂಜೆಯೊಳಗೆ ರಿಪೇರಿ ಆಗುತ್ತೆ. ಸಮಾಧಾನ ಮಾಡ್ಕಳಿ' ಅಂತ ಅವನನ್ನು ಮತ್ತವನ ಜತೆ ಬಂದವರ ಬಾಯಿ ಮುಚ್ಚಿಸಿದರಲ್ಲದೆ, 'ಈಗ ಹೋಗಿ ಬರ್ರಿ' ಎನ್ನುತ್ತ ಎಲ್ಲರನ್ನೂ ಸಾಗ ಹಾಕಿದರು.

ಕೆರೆಯಲ್ಲಿ ಹೆಣಗಳು ಬಿದ್ದಿರೋದು ಗೊತ್ತಾದರೆ ಈ ಜನ ಇನ್ನೆಷ್ಟು ರಂಪ ಮಾಡ್ತಾರೋ ಅಂತ ಚೇರ್ಮನ್ನರಿಗೆ ಅನ್ನಿಸಿತು. ಊಟ ಆದ ಮೇಲೆ ಪಿಡಿಓ, 'ಪೊಲೀಸರಿಗೆ ಕಂಪ್ಲೇಂಟು ಕೊಟ್ಟು ಬರ್ತೀನಿ' ಅಂತ ತನ್ನ ಮೋಟರ್‌ಬೈಕಿನಲ್ಲೇ ಹೋದ. ರಾಜಣ್ಣ, 'ಮನೆ ಕಡೆ ಏನಾಗಿದೆ ಅಂತ ನೋಡಿ ಮತ್ತೆ ಬರ್ತೀನಿ' ಅಂತ ಹೇಳಿ ಹೋದ.

ಇಬ್ಬರೂ ಹೋದ ಮೇಲೆ ಚೇರ್ಮನ್ನರು ಕೆರೆಯಲ್ಲಿರೋ ಹೆಣಗಳನ್ನು ಎತ್ತಿ ಹೊರ ಹಾಕಿಸೋ ಮಾರ್ಗಗಳನ್ನು ಯೋಚಿಸುತ್ತ ಕೂತರು. ಮಸ್ತಾನ್ ಬಂದಿದ್ದರೆ ಹೇಗಾದರೂ ಮಾಡಿ ಅವನನ್ನು